ಶಿಕಾರಿಪುರದಲ್ಲಿ ಕಟ್ಟುತ್ತಿರುವ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಮಂದಗತಿಯಿಂದ ನಡೆಯುತ್ತಿರುವುದು.

೧೯೨೫ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಿಂದಲೂ ಶಿಕಾರಿಪುರ ನಗರ ಪ್ರಥಮ ದರ್ಜೆ ಕಾಲೇಜಿನ ಕಟ್ಟಡಕ್ಕೆ ಈವರೆಗೆ ಖರ್ಚು ಮಾಡಿರುವ ಹಣವೆಷ್ಟು ?

ಆ) ಗುತ್ತಿಗೆದಾರನಿಗೆ ನಿಗದಿತ ಅವಧಿಯೊಳಗೆ ಸದರಿ ಕಾಮಗಾರಿಯನ್ನು ಪೂರೈಸಲು ಆದೇಶ ನೀಡಿರುವುದೇ ?

ಇ) ಹಾಲಿ ಇರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಮತ್ತು ಕಾರ್ಯನಿರ್ವಾಹಕ ಅಭಿಯಂತರರವರು ಉದ್ದೇಶ ಪೂರ್ವಕವಾಗಿ ಗುತ್ತಿಗೆದಾರನಿಗೆ ನಿರ್ದಿಷ್ಟ ಆದೇಶ ನೀಡದೆ ಸದರಿ ಕಟ್ಟಡದ ಕಾಮಗಾರಿಯು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ವಿಳಂಬಕ್ಕೆ ಕಾರಣಕರ್ತರಾದ ಅಧಿಕಾರಿಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು).—

			ರೂ. ಲಕ್ಷಗಳಲ್ಲಿ
ಅ)	೧೯೮೫—೮೬	...	೦.೩೮
	೧೯೮೬—೮೭	...	೦.೪೨
	೧೯೮೭—೮೮	...	೦.೧೮
	ಒಟ್ಟು		೦.೯೮

ಆ) ಹೌದು.

ಇ) ಇಲ್ಲ. ಅವಶ್ಯಕವಾದ ಸೂಚನೆಗಳನ್ನು ಕಾಲಕಾಲಕ್ಕೆ ಕೊಡಲಾಗುತ್ತಿದೆ.

ಈ) ಕಾಮಗಾರಿ ವಿಳಂಬವಾಗಲು ಗುತ್ತಿಗೆದಾರರೇ ಪೂರ್ಣ ಜವಾಬ್ದಾರಿರಾಗಿರುತ್ತಾರಾಗಿರುವ ಕಾರಣ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕಾಲೇಜು ಶಿಕ್ಷಣ ನಿರ್ದೇಶಕರಿಂದ ತನಿಖೆ

೧೨೭೩ ಶ್ರೀ ಇ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುತ್ತಿಗೆ ಉಪನ್ಯಾಸಕರನ್ನು ಖಾಯಂ ಮಾಡಲು ಸರ್ಕಾರದವರು ಕೈಗೊಂಡ ಕ್ರಮವೇನು ? (ಖಾಯಂಗೊಂಡವರ ವರ್ಗವಾರು ವಿವರ ನೀಡುವುದು).

ಆ) ೧೯೮೭-೮೮ನೇ ಶೈಕ್ಷಣಿಕ ವರ್ಷದಲ್ಲಿ ಕಾಲೇಜು ನಿರ್ದೇಶಕರು ತನಿಖೆ ಮಾಡಬೇಕೆಂದಿರುವ ನಿಗದಿತ ಕಾಲೇಜುಗಳೆಷ್ಟು ? ವಿವರ ನೀಡುವುದು.

ಇ) ಹಾಗಿಲ್ಲದಿದ್ದಲ್ಲಿ, ನಿಗದಿತಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಗುತ್ತಿಗೆ ಶಿಕ್ಷಕರನ್ನು ಖಾಯಂ ಮಾಡುವ ಬಗ್ಗೆ ಸರ್ಕಾರ ಯಾವುದೇ ನಿರ್ಧಾರವನ್ನೂ ಇದುವರೆವಿಗೆ ತೆಗೆದುಕೊಂಡಿರುವುದಿಲ್ಲ.

ಆ) ಕಾಲೇಜು ಶಿಕ್ಷಣ ನಿರ್ದೇಶಕರಿಗೆ, ಒಂದು ಶೈಕ್ಷಣಿಕ ವರ್ಷದಲ್ಲಿ ಇಂತಿಷ್ಟೇ ಕಾಲೇಜುಗಳನ್ನು ತಪಾಸಣೆ ಮಾಡಬೇಕೆಂಬ ಸರ್ಕಾರದ ಯಾವುದೇ ನಿಗದಿತ ಆದೇಶ ಇರುವುದಿಲ್ಲ. ಆದರೂ ಸಹ, ೧೯೮೭–೮೮ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ನಿರ್ದೇಶಕರವರು ಮೈಸೂರು ಹಾಗೂ ಧಾರವಾಡದಲ್ಲಿರುವ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಛೇರಿಗಳನ್ನು ಒಳಗೊಂಡಂತೆ, ೧೮ ಕಾಲೇಜುಗಳನ್ನು ತಪಾಸಣೆ ಮಾಡಿರುತ್ತಾರೆ. (ವಿವರಗಳನ್ನು ಅನುಬಂಧದಲ್ಲಿ ನೋಡಬಹುದು).

ಇ) ಕಾಲೇಜುಗಳ ತಪಾಸಣೆಯು ಪ್ರತಿವರ್ಷ ನಡೆಯುತ್ತಿರುವುದರಿಂದ, ವರ್ಷಕ್ಕೆ ಇಷ್ಟೇ ಕಾಲೇಜುಗಳ ಪರಿವೀಕ್ಷಣೆ ನಡೆಸಬೇಕೆಂದು ಗುರಿ ನಿಗದಿ ಪಡಿಸಲು ಅವಶ್ಯಕತೆ ಕಂಡುಬರಲಿಲ್ಲ.

ಅನುಬಂಧ

೧೯೮೭–೮೮ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರು ಈ ಕೆಳಕಂಡ ಪ್ರಾದೇಶಿಕ ಕಛೇರಿಗಳಿಗೆ : ಕಾಲೇಜುಗಳಿಗೆ ಭೇಟಿ ನೀಡಿದ ವಿವರಗಳ ಪಟ್ಟಿ.

ಕ್ರಮ ಸಂಖ್ಯೆ	ದಿನಾಂಕ	ಭೇಟಿ ನೀಡಿದ ಕಾಲೇಜುಗಳ : ಪ್ರಾದೇಶಿಕ ಕಛೇರಿಗಳ ವಿವರ.
೧.	೨೩—೬—೧೯೮೭	ಪ್ರಾದೇಶಿಕ ಕಛೇರಿ, ಮೈಸೂರು.
೨.	೯—೭—೧೯೮೭	ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ಚರ್ಚಿಸಲು ಎಲ್ಲಾ ಅಧಿಕಾರಿಗಳ ಹಾಗೂ ಪ್ರಾದೇಶಿಕ ಕಛೇರಿ ಉಪ–ನಿರ್ದೇಶಕರ ಸಭೆಯನ್ನು ಮೈಸೂರಿನ ಟೆರೇಷಿಯನ್ ಕಾಲೇಜಿನಲ್ಲಿ ನಡೆಯಿತು.
೩.	೮—೯—೧೯೮೭	ಗುಲ್ಬರ್ಗಾದಲ್ಲಿರುವ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಕಾಲೇಜುಗಳು.
೪.	೧೪—೯—೧೯೮೭	ಮಂಡ್ಯ ಮತ್ತು ಮೈಸೂರಿನಲ್ಲಿರುವ ಕಾಲೇಜುಗಳು.
೫.	೧೮—೯—೧೯೮೭	ಪ್ರಥಮ ದರ್ಜೆ ಕಾಲೇಜು, ಮುಳಬಾಗಿಲು.
೬.	೮—೧೦—೧೯೮೭	ಕೋಲಾರದಲ್ಲಿರುವ ಸರ್ಕಾರಿ ಕಾಲೇಜುಗಳ ಮತ್ತು ಕೆ.ಜಿ.ಎಫ್. ಪ್ರಥಮ ದರ್ಜೆ ಕಾಲೇಜು,
೭.	೧೨—೧೦—೧೯೮೭ ರಿಂದ ೧೫—೧೦—೧೯೮೭	ಧಾರವಾಡದಲ್ಲಿರುವ ಖಾಸಗಿ ಕಾಲೇಜುಗಳು.
೮.	೨೮—೧೦—೧೯೮೭	ಪ್ರಥಮ ದರ್ಜೆ ಕಾಲೇಜು, ಕೆ.ಜಿ.ಎಫ್.
೯.	೩೦—೧೦—೧೯೮೭	ಮಂಗಳೂರಿನಲ್ಲಿರುವ ಎಲ್ಲಾ ಕಾಲೇಜುಗಳು.
೧೦.	೧೧—೧೧—೧೯೮೭	ಬೆಳಗಾಂನಲ್ಲಿರುವ ಕಾಲೇಜುಗಳು.
೧೧.	೧೬—೧೧—೧೯೮೭	ದಾವಣಗೆರೆಯಲ್ಲಿರುವ ಕಾಲೇಜುಗಳು.
೧೨.	೧೯—೧೧—೧೯೮೭	ಶ್ರೀ ಲಾಲ್‌ಬಹದ್ದೂರ್ ಕಾಲೇಜು, ಸಾಗರ.
೧೩.	೨೫—೧೧—೧೯೮೭	ಪ್ರಾದೇಶಿಕ ಕಛೇರಿ, ಧಾರವಾಡ
೧೪.	೨೭—೧೧—೧೯೮೭	ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ
೧೫.	೨೧—೧೨—೧೯೮೭	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾರವಾರ.
೧೬.	೨೨—೧೨—೧೯೮೭	ದಾಂಡೇಲಿಯಲ್ಲಿರುವ ಖಾಸಗಿ ಪ್ರಥಮ ದರ್ಜೆ ಕಾಲೇಜು.
೧೭.	೧೨—೧—೧೯೮೮	ಭಂಡಾರ್‌ಕರ್ಸ್ ವಿಜ್ಞಾನ ಮತ್ತು ಕಲಾ ಕಾಲೇಜು, ಕುಂದಾಪುರ.
೧೮.	೭—೩—೧೯೮೮	ಕುವೆಂಪು ಕಾಲೇಜು, ಚನ್ನಪಟ್ಟಣ.
೧೯.	೨೬—೩—೧೯೮೮	ಶ್ರೀ ಆದಿಚುಂಚನಗಿರಿ ಕಾಲೇಜು, ಚನ್ನರಾಯಪಟ್ಟಣ.